(SRI A..G. RAMACHANDRA RAO).

ಬಾಧ್ಯತೆಗಳು ಮತ್ತು ಇತರ ಎಲ್ಲಾ ತತ್ವಗಳು ಏನೇ ನಿರುತ್ತವೆಯೋ ಅವುಗಳನ್ನೆಲ್ಲಾ ಕಾಪಾಡಿಕೊಂಡು ಬರಲು ವಿರೋಧಪಕ್ಷದವರಿಗೆ ಎಷ್ಟು ಆನಕ್ತಿ ಇದೆಯೋ ಅವುಗಳೆಲ್ಲವನ್ನೂ ಕಾಪಾಡಿಕೊಂಡು ಬರಲು ನವ:ಗೂ ಅಷ್ಟೇ ಶ್ರದ್ಧೆ ಮತ್ತು ಆನಕ್ತಿಗಳಿರುತ್ತವೆಂದು ಹೇಳುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಕಾಂಗ್ರೆಸ್ ಸರ್ಕಾರ್ ಬಂದರೂ ಪ್ರಜೆಗಳಿಗೇನೂ ಸಾರ್ಥಕವಾಗಲಲ್ಲವಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು. 70 ವರ್ಷಗಳ ಆಗುಹೋಗುಗಳಿಗೆಲ್ಲಾ ಈ ಕಾಂಗ್ರೆಸ್ಸೇ ಜವಾಬ್ದಾರಿಯೆಂದು ಹೇಳಿದರೆ ಅದಕ್ಕೆ ನಾನೇನು ಹೇಳಲಿ?

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಾದರೆ ಇದಕ್ಕೆಲ್ಲ ಜನರು ಜವಾಬ್ದಾರರೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಜನರೇ ಕಾಂಗ್ರೆಸ್ಸನ್ನು ಚುನಾಯಿಸಿದ್ದು. ಈ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಮೇಲೆ, ಸ್ತ್ರೀಯರಿಗೆ ಸಮಾನ ಪ್ರಾತಿನಿಧ್ಯ ದೊರಕಿಸಿಕೊಡಲಾಗಿದೆ, ಅಸ್ಪೃಶ್ಯತೆಯ ನಿವಾರಣೆ, ಪಾಂಚವಾರ್ಷಿಕ ಯೋಜನೆ, ಹೀಗೆ ಹೇಳುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯೇ ಆಗುತ್ತದೆ, ಆದರೆ ಅದಕ್ಕೆಲ್ಲಾ ಈಗ ವೇಳೆಯಿಲ್ಲ. ಹೀಗೆ ನಾವು ಎಷ್ಟೋ ಕೆಲಸಗಳನ್ನು ಮಾಡಿದ್ದರೂ ನಮ್ಮನ್ನು ಜರಿಯುತ್ತಿದ್ದೀರಿ. ಇದೆಲ್ಲಾ ನಮ್ಮ ದೇಶದ ದೌರ್ಭಾಗ್ಯ. ನಾನು ಇದಕ್ಕಾಗಿ ಯಾರನ್ನೂ ಆಕ್ಷೇಪಣೆಮಾಡುವುದಕ್ಕೆ ಹೋಗುವುದಿಲ್ಲ. ಈಗಲಾದರೂ ನಾವೆಲ್ಲರೂ ಒಂದು ಗೃಹದಲ್ಲಿರುವವರಂತೆ ವರ್ತಿಸೋಣ. ನೀವೂ ನಾವೂ ಎಲ್ಲರೂ ಪ್ರಾಮಾಣಿಕತೆಯಿಂದ ನಡೆಯೋಣ. ದೇಶಾಭಿವೃದ್ಧಿಯ ದೃಷ್ಟಿಯಿಂದ ತಾವು ತಮ್ಮ ವಿರೋಧಾಭಿಪ್ರಾಯಗಳನ್ನು ವಾಪಸ್ಸು ತೆಗೆದುಕೊಂಡು ಈ ಬಿಲ್ಲಿಗೆ ತಾವೆಲ್ಲರೂ ಸಹಕಾರ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is:

"That the Mysore Apporpriation (No. 2) Bill, 1953, be taken into consideration."

The motion was adopted.

Mr. SPEAKER.—Clauses 2 and 3. The question is:

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is:

"That the Schedule stand part of the Bill."

The motion was adopted.

The Schedule was added to the Bill.

Mr SPEAKER.—Clause 1. The question is:

"That Clause 1 stand part of the Bill."

The motion was adopted

Clause 1 was added to the Bill.

Mr. SPEAKER.—Title and Preamble. The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri A. G. RAMACHANDRA RAO.—Sir, I move:

"That the Mysore Appropriation (No. 2) Bill, 1953, be passed."

Mr. SPEAKER.—The question is:

"That the Mysore Appropriation (No. 2) Bill, 1953, be passed."

The motion was adopted.

MYSORE ELEMENTARY EDUCATION AND MOTOR VEHICLES TAXATION AND TOLLS AMENDMENT BILL, 1953.

Motion to consider.

Sri K. HANUMANTHAIYA (Chief Minister).—Sir, I move:

"That the Mysore Elementary Education and Motor Vehicles Taxation and Tolls (Amendment) Bill, 1953, as reported by the Select Committee, be taken into consideration."

Mr. SPEAKER.—Motion moved:

"That the Mysore Elementary Education and Motor Vehicles Taxation and Tolls (Amendment) Bill, 1953, as reported by the Select Committee, be taken into consideration."

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ) —ಸ್ವಾಮಿ, ಈಗಾಗಲೇ 5 ಘಂಟೆಗಳಾಗುತ್ತ ಬಂತು. ಈ ಬಿಲ್ಲನ್ನು ನಾಳೆದಿವಸ ಚರ್ಚೆಗೆ ಇಟ್ಟುಕೊಂಡರೆ ಅನುಕೂಲವಾಗಿರುತ್ತದೆ. We have just received copy of the Bill.

Mr. SPEAKER.—It was agreed that this Bill should be got through today. This must be forwarded to the Legislative Council tomorrow.

ಶ್ರೀ ಬಿ. ಹುಚ್ಚೇಗೌಡ —ಸ್ವಾಮಿ, ಇದು ಈಗಾಗಲೇ ನಿನ್ನೆಪೊನ್ನೆ ಹೇಳಿರತಕ್ಕ ವಿಚಾರವೇ ಆಗಿದೆ. ಆದರೆ ಈ ಮಸೂದೆ ಸೆಲೆಕ್ಟ್ ಸಮಿತಿಯವರ ಮುಂದೆ ಹೋಗಿದ್ದಾಗ ಅವರು ಕೇವಲ ಒಂದೆರಡು ಬದಲಾವಣೆಗಳನ್ನು ಮಾತ್ರ ಮಾಡಿದ್ದಾರೆ. ಈ ಸೆಲೆಕ್ಟ್ ಸಮಿತಿಯವರ ವರದಿಯನ್ನು ಈಗತಾನೆ ಕೊಟ್ಟರು. ಇದನ್ನು ಇನ್ನೂ ನಾನು ಪೂರ್ತಿಯಾಗಿ ಓದಿಲ್ಲ.

5 P.M.

30 ರಿಂದ 20ಕ್ಕೆ ಒಂದು ಬದಲಾವಣೆ, 20 ರಿಂದ 12ಕ್ಕೆ ಇನ್ನೊಂದು ಬದಲಾವಣೆ ಮಾಡಿರುವುದು ಬಿಟ್ಟು ಇನ್ನೇನೂ ಹೆಚ್ಚಿಗೆ ಮಾಡಿರುವುದು ಕಾಣಬರುವುದಿಲ್ಲ. ಒಟ್ಟಿನಲ್ಲಿ ನಾನು ಮೊದಲೇ ಹೇಳಿದಹಾಗೆ, ಈ ತೆರಿಗೆ ವಿಧಿಸಬೇಕಾದರೆ, ತೆರಿಗೆಯಿಂದ ವಸೂಲಾದ ದುಡ್ಡನ್ನು ಆಯಾ ಸಂಬಂಧಪಟ್ಟ ಬಾಬಿಗೇ ಖರ್ಚುಮಾಡಬೇಕು. ಹಾಗಿಲ್ಲದೆ ಇದನ್ನೂ ಜೇರೆಂತೆ invest ಮಾಡಿ, ಹೊಸಹೊಸದಾಗಿ ಮತ್ತೆ ತೆರಿಗೆಗಳನ್ನು ಹಾಕಿ ಜನರ ಅಭಿವೃದ್ಧಿಯನ್ನು ಕುಂಠಿತಗೊಳಿಸುವುದು ನ್ಯಾಯವಲ್ಲವೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಈ ಮಸೂದೆಯನ್ನು ಸದ್ಯಕ್ಕೆ ಮುಂದಕ್ಕೆ ಹಾಕುತ್ತೀರೆಂದು ನಂಬಿದ್ದೇನೆ.

ಇನ್ನೊಂದು ವಿಚಾರ ಹೇಳಿದರು: ಕೇಂದ್ರ ಸರ್ಕಾರದವರು ನಮ್ಮಿಂದ ಅನೇಕ ಹೆಚ್ಚಿನ ಉತ್ಪತ್ತಿಯ ಬಾಬುಗಳನ್ನು ತೆಗೆದುಕೊಂಡುಬಿಟ್ಟಿದ್ದಾರೆ ಎಂದು ಒಂದು ಕಾರಣವನ್ನು ಈ ಮಸೂದೆ ತರುವುದಕ್ಕೆ ಹೇಳಿದರು. ಈಗ ಸುಮಾರು 3 ವರ್ಷಗಳಿಂದ 185 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಪಡೆದುಕೊಂಡಿದ್ದರೂ ಕೇವಲ 60 ಕೋಟಿ ರೂಪಾಯಿಗಳನ್ನು ರೋಡ್ ಡೆವಲಪ್‌ಮೆಂಟಿಗೆ ಖರ್ಚುಮಾಡುತ್ತಿದ್ದಾರೆ. ಅವರಿಂದ ನಾವೇಕೆ ಇನ್ನಷ್ಟು ತೆಗೆದುಕೊಳ್ಳಕೂಡದು? ಈಗಲೂ ಅವರು ಇಷ್ಟೊಂದು accumulated cess ಇಟ್ಟುಕೊಂಡಿರುವಾಗ ಅವರನ್ನೇಕೆ ಕೇಳಕೂಡದು? ಆ ಬಾಬಿನಲ್ಲಿ ನೀವು ಒತ್ತಾಯಮಾಡುವುದಿಲ್ಲ. ಎಲ್ಲಿ ಹಣ ಸುಲಭವಾಗಿ ದೊರೆಯಬಹುದೋ ಅಲ್ಲಿ ಯಾವ ಕಾರ್ಯಕ್ರಮವನ್ನೂ ನಮ್ಮ ಸರ್ಕಾರದವರು ಕೈಗೊಳ್ಳದಿರುವುದು ನಿಜವಾಗಿಯೂ ಅವರ ಕರ್ತವ್ಯಲೋಪವೆಂಬುದನ್ನು ನಾನು ಪದೇಪದೇ ಅವರ ಗಮನಕ್ಕೆ ತಂದಿದ್ದೇನೆ. ನಾನು ಆಗಲೇ ಇದನ್ನು ಸೂಚಿಸಿದ್ದರೂ ಕೂಡ ತಾವು ಸರಿಯಾದ ಜವಾಬು ಕೊಡಲಿಲ್ಲ. ಇಂಡಿಯಾ ಸರ್ಕಾರದವರು ನಮ್ಮಮೇಲೆ ಟ್ಯಾಕ್ಸ್ ಹಾಕುತ್ತಾರೆ; ಆ ಟ್ಯಾಕ್ಸಿನಿಂದ ಬರುವುದನ್ನು ಬೇರೆ ರೀತಿಯಲ್ಲಿ ಅವರು ಖರ್ಚುಮಾಡುವಾಗ, ವರ್ಷಕ್ಕೆ ಬರುವ ಸುಮಾರು 60 ಕೋಟಿ ರೂಪಾಯಿಗಳಲ್ಲಿ ಅಲ್ಪಸ್ವಲ್ಪವಾದರೂ ನಾವು ತೆಗೆದುಕೊಳ್ಳಬೇಕೆಂಬುದನ್ನು ಒತ್ತಾಯಪಡಿಸಬೇಕೆಂಬ ವಿಷಯವನ್ನು ನಾನು ಹೇಳುತ್ತಿದ್ದೇನೆ. ಈಬಗ್ಗೆ ನೀವು ಧೈರ್ಯಮಾಡುತ್ತಿಲ್ಲ. ಯಾವುದರಲ್ಲೂ ಇಂಡಿಯಾ ಸರ್ಕಾರದವರ ಕೈಯೇ ಮೇಲಾಗುತ್ತದೆ. ಅವರೂ ನಾವೂ ಒಂದೇ ಎಂದು ಭಾವಿಸುತ್ತೀರಿ. ಆದರೆ ಇವೊತ್ತಿಗೂ ನಮ್ಮ ರೈಲ್ವೆ ನೌಕರರನ್ನು 3ನೆಯ ಕ್ಲಾಸಿನಲ್ಲೇ ಇಟ್ಟುಕೊಂಡಿದ್ದಾರೆ. 16 ವರ್ಷ ಸರ್ವಿಸ್ ಆಗಿದ್ದರೂ ನಮ್ಮವರು 3ನೆಯ ಕ್ಲಾಸಿನಲ್ಲೇ ಇದ್ದಾರೆ. ಮಾನ್ಯ ಮರಿಯಪ್ಪನವರು 'ನಾವು ಅವರುಗಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳುತ್ತೇವೆ' ಎಂದು ಹೇಳಿದ್ದರು. ಆದರೂ ಏನಾಯಿತು? ಯಾವುದರಲ್ಲೂ ತಮ್ಮ ಕರ್ತವ್ಯ ತಾವು ಮಾತುವುದಿಲ್ಲ. ಮಾತಿಗೆಮುಂಚೆ ಇಂಡಿಯಾ ಸರ್ಕಾರದವರೂ ನಾವೂ ಒಂದೇ ಎಂದು ಹೇಳುತ್ತೀರಿ. ಇಂಡಿಯಾ ಸರ್ಕಾರದವರು ಮಾತ್ರ ತಮ್ಮ ಮಾತುಗಳಿಗೆ ಬೆಲೆ ಕೊಡುವುದಿಲ್ಲ. ಮುಂದಾದರೂ ಇಂಥ ಲೋಪಬರದಂತೆ ನೋಡಿಕೊಳ್ಳಬೇಕು. ಮಿಲಿಟರಿಯಲ್ಲೂ, ಒಂದೇದಿನಕ್ಕೆ 2,500 ಜನರನ್ನು ಮನೆಗೆ ಕಳುಹಿಸಿಬಿಟ್ಟರು. ಈ ಅನ್ಯಾಯಕ್ಕೆ ಪರಿಹಾರ ಇನ್ನೂ ದೊರೆಯಲಿಲ್ಲ. ಆದ್ದರಿಂದ ದಯವಿಟ್ಟು ನಾವೂ ಅವರೂ ಒಂದೇ ಎಂದು ಹೇಳುವುದನ್ನು ಬಿಡಬೇಕು. ಇನ್ನು ಮುಂದಾದರೂ 'serious ಆಗಿ ನೋಡಿ, ಇಂಡಿಯಾ ಗೌರ್ನಮೆಂಟಿನವರು ನ್ಯಾಯವಾಗಿ ಕೊಡಬೇಕಾದದ್ದೆಷ್ಟು ಎಂಬುದನ್ನು ನೋಡಬೇಕು. ಅದನ್ನು ತೆಗೆದುಕೊಂಡು ಅಲ್ಲಿಗೂ ಸಾಲದೆಬಂದರೆ ಆಗ ತೆರಿಗೆ ಹಾಕುವುದನ್ನು ಯೋಚನೆಮಾಡಿ. ಅಲ್ಲಿಯವರೆಗೂ ಗ್ರಾಮಾಂತರ ಜನರಿಗೆ ತೊಂದರೆಮಾಡಬೇಡಿ. ಬಸ್ಸುಗಳೆಲ್ಲಾ ನಿಂತುಹೋದರೆ ಹಳ್ಳಿಯ ಜನರು ನಡೆದುಕೊಂಡೇ ಹೋಗುತ್ತಾರೆಂದು ಹೇಳಿದರು. ಸಾಮಾನ್ಯ ಮನುಷ್ಯನಿಗೆ ಹೆಚ್ಚುಹೆಚ್ಚು ಸೌಲಭ್ಯ ಸೌಕರ್ಯಗಳನ್ನು ಕೊಡಿ ಎಂದು ಕೇಳುತ್ತಿರುವಾಗ, ಆತ ಎತ್ತಿನ ಗಾಡಿಯಲ್ಲೇ ಹೋಗಲಿ, ನಡೆದುಕೊಂಡೇ ಹೋಗಲಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಸರ್ಕಾರದವರು ಈಗೆ ತೆರಿಗೆಯನ್ನು ಜಾಸ್ತಿಮಾಡದೆ ಈ ಒಂದು ಕೈಗಾರಿಕೆ ಉಳಿದುಕೊಂಡು ಬರುವಂತೆ ಮಾಡಬೇಕೆಂದು ನಾನು ಮತ್ತೊಮ್ಮೆ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆಯ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಶ್ರೀಮಾನ್ ಹುಚ್ಚೇಗೌಡರು ಈ ಬಿಲ್ಲಿನ ವಿಚಾರದಲ್ಲಿ ಮಾತನಾಡುತ್ತಾ ಅವರು ಹೇಳಿದ ಒಂದು ಮುಖ್ಯವಾದ ವಾದವೇನೆಂದರೆ, ಆಯಾ ತೆರಿಗೆಯಿಂದ ವಸೂಲಾದ ಹಣವನ್ನು ಆಯಾ ಬಾಬಿಗೇ ಖರ್ಚುಮಾಡಬೇಕು ಎಂಬುದು. ಇನ್ನೊಂದು ಅವರ ವಾದವೇನೆಂದರೆ, ಇಂಡಿಯಾ ಸರ್ಕಾರಕ್ಕೆ ಈಗ ಹೋಗಿರತಕ್ಕ ಅನೇಕ ಬಾಬುಗಳ ವಿಚಾರದಲ್ಲಿ ನಾವು ಸರಿಯಾದ ಕಾರ್ಯಕ್ರಮ ಕೈಕೊಂಡಿಲ್ಲ ಎಂದು. ಇದಕ್ಕೆ ಉತ್ತರ ಕೊಡುವುದಕ್ಕೆ ಮುಂಚೆ ನನ್ನ ಮನಸ್ಸಿನಲ್ಲಿ ಒಂದು ಉದ್ವೇಗ ಏದೆ. ಅದನ್ನು ಈ ಸಂದರ್ಭದಲ್ಲಿ ಹೇಳದೆ ನಾನು ಮುಂದೆ ಹೋಗುವುದಕ್ಕೆ ಕಷ್ಟವಾಗಿದೆ.

ಶ್ರೀಮಾನ್ ಇಮಾಂರವರ ವಿಷಯದಲ್ಲಿ ನನಗೆ ಬಹಳ ಗೌರವವಿದೆ. ಅವರು ನಮ್ಮ ಡಿಸ್ಟ್ರಿಕ್ಟಿನ ಪ್ರಮುಖ ಮುಖಂಡರೆಂದು ನಾನು ಭಾವಿಸಿದ್ದೇನೆ. ಇವೊತ್ತಿನ ದಿವಸ ಅವರು ಮಾತನಾಡುತ್ತಾ ಮಂತ್ರಿಗಳ ವಿಚಾರದಲ್ಲಿ ಹೇಳಿದ ಒಂದೆರಡು ಮಾತುಗಳಿಗೆ ನಾನು ಜವಾಬು ರೂಪವಾಗಿ .....

Sri J. MOHAMED IMAM.—I rise to a point of order. I think we are speaking on the report of the Select Committee.

Sri H. SIDDAVEERAPPA.—How it is relevant I will say.

Sri J. MOHAMED IMAM.—I said we are now debating on the report of the Select Committee. The occasion on which I spoke was the last occasion when my friend should have taken the opportunity of refuting it. Now we are dealing with the report of the Select Committee. I have not taken part in the debate so far as the report of the Select Committee is concerned. When it is so, can a member refer to another member who has not taken part in the debate and can he refer to the previous speech made by the other member on some occasion, is the point to be decided by the Chair. Because, I will have no opportunity of refuting what he said and he cannot take advantage and make all sorts of allegations. I want a decision for future guidance.

Mr. SPEAKER.—I would like to draw the attention of the House to Rule 77 :

> "The debate on a motion that the Bill as reported by the Select Committee be taken into consideration shall be confined to consideration of the report of the Select Committee and the matters referred to in that report or any alternative suggestions consistent with the principle of the Bill."

Even the previous speaker, Hon'ble Member Sri Hutche Gowda, has gone a little bit out of the way. That does not matter. The discussion may be confined to the changes made by the Select Committee.

Sri B. HUTCHE GOWDA.—I was within bounds.

Sri H. SIDDAVEERAPPA.—I shall obey the Chair and take the earliest opportunity with your permission to refer to what the Hon'ble Member has said. It has entered into our hearts like arrows.

ಇವೊತ್ತಿನ ದಿವಸ ಶ್ರೀವಾ ಹುಚ್ಚೇಗೌಡರು ಮಾಡಿರತಕ್ಕ ಭಾಷಣದಲ್ಲಿ ಅವರು ಅಷ್ಟಾಗಿ ತೆರಿಗೆಯ ವಿಚಾರ ಏನೂ ಹೇಳಲಿಲ್ಲ. ತೆರಿಗೆಯನ್ನು ಏಕೆ ಹಾಕುತ್ತೀವೋ ಅದಕ್ಕೆ ಮಾಸಲಾಗಿಟ್ಟು ಆ ಬಾಬಿಗೇ ಉಪಯೋಗಿಸಬೇಕೆಂಬುದೇ ಅವರ ವಾದ. ಅದರ ವಿಷಯದಲ್ಲಿ, ಈ ತೆರಿಗೆ ಯಾವ ಸಂದರ್ಭದಲ್ಲಿ ಬಂತು, ಯಾವ ಸಂದರ್ಭದಲ್ಲಿ ನಾವು ಹಾಕುತ್ತೀವೆ ಎಂಬ ಬಗ್ಗೆ ಸೆಲೆಕ್ಟ್ ಕಮಿಟಿಯವರು ಬಹಳ ಕೂಲಂಕಷವಾಗಿ ಪರೀಕ್ಷೆಮಾಡಿ, ಈಗಿನ ಪ್ರಕೃತ ಹಣಕಾಸಿನ ಪರಿಸ್ಥಿತಿಯಲ್ಲಿ ನಾವು ಏನು ಮಾಡಿದರೆ ನಮ್ಮ ದೇಶದ ಪರಿಸ್ಥಿತಿ ಸರಿಹೋಗುತ್ತದೆ ಎಂಬ ವಿಷಯಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಒಂದು ಅತ್ಯುತ್ತಮವಾದ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಯಾವ ಮಹನೀಯರು ಡೆಮೊಕ್ರಾಟಿಕ್, ಡೆಮೊಕ್ರಾಟಿಕ್ ಎಂದು ಅಹರ್ನಿಶವೂ ಮಾತನಾಡುತ್ತಾರೋ ಆ ಮಹನೀಯರೂ ಸಹ ಈ ಕಮಿಟಿಯಲ್ಲಿದ್ದು ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದರೆ, ಅವರು ಡೆಮೊಕ್ರಾಟಿಕ್ ತತ್ವಕ್ಕೆ ಅಂಟಿಕೊಂಡಿದ್ದಕ್ಕೆ ಸಾರ್ಥಕವಾಗುತ್ತಿತ್ತು. ಹಾಗೆ ಮಾಡದಿರುವುದನ್ನು ನೋಡಿದರೆ, ಅವರ ತತ್ವ 'ಹೇಳುವುದೊಂದು ಮಾಡುವುದೊಂದು' ಎಂಬುದೋ ಎಂಬ ಶಂಕೆ ಬರುತ್ತದೆ.

ಇವೊತ್ತಿನ ದಿವಸ ಯಾವ ರೀತಿ ಈ ಬಿಲ್ಲನ್ನು ಪರೀಕ್ಷೆ ಮಾಡಿದ್ದಾರೆ ಎಂಬುದನ್ನು ನೋಡೋಣ. ನಾವಾದರೂ ಯಾವ ಉದ್ದೇಶದಿಂದ ಈ ಸೆನ್ಸನ್ನೂ ಹಾಕಬೇಕೆಂದು ಯೋಚನೆ ಮಾಡಿದೆವು ಎಂಬುದನ್ನು ಹಣಕಾಸಿನ ಮಂತ್ರಿಗಳು ಆಗಲೇ ಹೇಳಿದ್ದಾರೆ. ರಾಜಪ್ರಮುಖರ ಭಾಷಣದಲ್ಲಿಯೂ ಅದು ಸೂಚಿತವಾಗಿತ್ತು. ಈ ಮಸೂದೆ consideration stage ಗೆ ಬಂದಾಗಲೂ ನಿನ್ನೆ ದಿವಸವೆಲ್ಲಾ ವಿಫುಲವಾಗಿ ಈ ವಿಚಾರ ಚರ್ಚೆಯಾಗಿದೆ. ಈ ದಿವಸ ಸೆಲೆಕ್ಟ್ ಕಮಿಟಿಯವರು ಬಹಳ ಕೂಲಂಕಷವಾಗಿ ಇದರಲ್ಲಿರತಕ್ಕಂಥ ಹೆಚ್ಚಿನ ದರಗಳನ್ನು—ಏನಾದರೂ ಇದ್ದರೆ—ಅವನ್ನು ಯಾವ ರೀತಿ ಕಡಮೆ ಮಾಡಬೇಕು, ಆ ರೀತಿ ಕಡಮೆ ಮಾಡಿದರೆ ಎಷ್ಟರಮಟ್ಟಿಗೆ ಯಾರು ಯಾರಿಗೆ ಹೊರಬಾರದ ಹೊರೆಯಾಗಿದೆಯೋ ಅವರಿಗೆ ತಕ್ಕ ಪರಿಹಾರವನ್ನು ಕೊಡಬಹುದು ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯೋಚನೆಮಾಡಿದ್ದಾರೆ.

ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುವ ಒಂದು ವಿಷಯವೇನೆಂದರೆ, ಈ ಮಸೂದೆಯನ್ನು ತಯಾರಿಸಿದ್ದಾಗ ನಮ್ಮ ನೆರೆಳ್ ಪ್ರಾಂತವಾದ ಮದರಾಸಿನಲ್ಲಿ ಯಾವ ಯಾವ ತೆರಿಗೆ ಎಷ್ಟೆಷ್ಟಿತ್ತು ಎಂಬುದನ್ನು ಮುಂದಿಟ್ಟುಕೊಂಡು ಮಾಡಿದೆವೇ ಹೊರತು, ಅದಕ್ಕಿಂತ ಒಂದು ಕಾಸೂ ಹೆಚ್ಚಾಗಿ ಹಾಕಿಲ್ಲ ಎಂಬುದನ್ನು ಮರೆಯಬಾರದು. ಇನ್ನೊಂದು ವಿಷಯವನ್ನು ಸಭೆ ಗಮನಿಸಬೇಕು. ಈ ಹೊತ್ತು ಸರ್ಕಾರ ಈ ಮಸೂದೆಯ ಮೂಲಕ ತೆಗೆದುಕೊಳ್ಳುವ ಅಧಿಕಾರ ಒಂದು ಪರಮಾವಧಿ, maximum ಅಥವಾ ceiling ಎಂಬುದನ್ನು ಮರೆಯಬಾರದು. Section 3 of the Mysore Motor Vehicles Taxation and Tolls Act of 1951 ಇದನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಅದರಲ್ಲಿ.—

> "Government may by notification direct the levy of all or any of the following taxes on motor vehicles used or kept for use in the State at rates not exceeding those prescribed in the first schedule and subject to the ..... exemptions and limitations specified thereunder, ..."

ಇದಕ್ಕೆ ಅಲ್ಲಿ ಏನು ಷೆಡ್ಯೂಲ್ ಇತ್ತೋ ಅದನ್ನು ಸ್ವಲ್ಪ ಬದಲಾವಣೆ ಮಾಡಿದ್ದೇವೆ, ದರವನ್ನು ಸ್ವಲ್ಪ ಹೆಚ್ಚು ಮಾಡಿದ್ದೇವೆ. ಹೀಗೆ ಮಾಡಲು ಸರ್ಕಾರಕ್ಕೆ ಈಗಿರತಕ್ಕ ಷೆಡ್ಯೂಲಿನ ಪ್ರಕಾರ ಅಧಿಕಾರವಿದೆ. ಈಗ ಏನಿದ್ದರೂ ಆ ಶರಮಾವಧಿಗೆ ಒಪ್ಪಿಗೆಯನ್ನು ಕೊಡುತ್ತಿದ್ದೇವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮೋಟಾರು ಟ್ಯಾಕ್ಸ್ ತೆಗೆದುಕೊಳ್ಳೋಣ, ನಾನು ಹಿಂದೆಯೇ ಹೇಳಿರುವಂತೆ 2,407 ಮೋಟಾರು ಸೈಕಲ್‌ಗಳು ಸಂಸ್ಥಾನದಲ್ಲಿವೆ ಇದುವರೆಗೆ 22-8-0 ರೂಪಾಯಿ ತೆರಿಗೆ ಹಾಕುತ್ತಿದ್ದೆವು. ಮದರಾಸಿನಲ್ಲಿ 36 ರೂಪಾಯಿ ಇತ್ತು. ಆದರೂ ನಾವು ಇಷ್ಟೇ ಎಂದರೆ 22½ ರೂಪಾಯಿ ಇಟ್ಟೆವು. ಇದರಿಂದ 2,16,630 ರೂಪಾಯಿ ಬರುತ್ತಿತ್ತು. ಈಗಲೂ ನಾವು ಯೋಚನೆ ಮಾಡಿ, ಮೋಟಾರ್ ಸೈಕಲ್‌ಗೆ ಸ್ವಲ್ಪ ಹೆಚ್ಚಿಸಿದರೆ ಜಾಸ್ತಿಯೇನೂ ಆಗುವುದಿಲ್ಲವೆಂದು 36 ರೂಪಾಯಿ ಎಂದು ಬದಲಾವಣೆ ಮಾಡಿದ್ದೇವೆ, ಒಂದು ಮೋಟಾರು ಬೈಸಿಕಲ್ಲಿಗೆ 13½ ರೂಪಾಯಿ ಹೆಚ್ಚಾಯಿತು. ಇದರಿಂದ ವರ್ಷಕ್ಕೆ 32,500 ರೂಪಾಯಿ ಜಾಸ್ತಿ ಬರುತ್ತದೆ. ಈಗಿನ ಷೆಡ್ಯೂಲ್ ಪ್ರಕಾರ ಮೋಟಾರು ಕಾರುಗಳು, ಶ್ರೀಮಾನ್ ಇಮಾಂ ಸಾಹೇಬರು ಇಟ್ಟುಕೊಂಡು ಓಡಾಡುವಂಥ ಕಾರುಗಳು, 7,500 ಇವೆ. ಇವುಗಳ ಮೇಲೆ ವರ್ಷಕ್ಕೆ 84 ರೂಪಾಯಿ ಹಾಕುತ್ತಿದ್ದೇವೆ. ಇದರಿಂದ 25,26,000 ರೂಪಾಯಿಗಳ ವರಮಾನವಿದೆ. ಈಗ ಇದನ್ನು 120 ರೂಪಾಯಿ ಮಾಡಿದ್ದೇವೆ. ವರ್ಷಕ್ಕೆ 36 ರೂಪಾಯಿಗಳನ್ನು ಹೆಚ್ಚಾಗಿ ಕೊಡುವುದು ಅವರ ಸಿಗರೇಟಿಗೆ ಖರ್ಚು ಮಾಡುವಷ್ಟೂ ಆಗುವುದಿಲ್ಲ, ಬೆಂಕಿ ಪೆಟ್ಟಿಗೆಗೆ ಖರ್ಚು ಮಾಡುವಷ್ಟಾಗುತ್ತದೆ. ಇದು ಅಷ್ಟೇನೂ ಹೆಚ್ಚಲ್ಲ. ತಿಂಗಳಿಗೆ ಮೂರು ರೂಪಾಯಿ ಆಯಿತು. ಒಂದು ಕಾರು ಇಟ್ಟುಕೊಳ್ಳುವವರ ಯೋಗ್ಯತೆಯೆಷ್ಟು, ಅವರ ವರಮಾನವೆಷ್ಟಿರುತ್ತದೆ, ಇವರಿಗೆ ತಿಂಗಳಿಗೆ 3 ರೂಪಾಯಿ ಜಾಸ್ತಿಯೇ? ಎನ್ನುವುದನ್ನು ಯೋಚನೆ ಮಾಡಬೇಕು. ಈಗ ಮಾಡಿರುವಂತೆ 36 ರೂಪಾಯಿಗಳು ಹೆಚ್ಚಾದರೆ ಇದರಿಂದ 2,70,000 ರೂಪಾಯಿಗಳು ಜಾಸ್ತಿ ಬರುತ್ತದೆಂದು ಅಂದಾಜು ಮಾಡಿದೆ.

ಇನ್ನು ಲಾರಿಗಳ ವಿಚಾರ ಏನಾಗಿದೆಯೆಂದರೆ, ಸಂಸ್ಥಾನದಲ್ಲಿ 3 347 ಲಾರಿಗಳಿವೆ. ಈ ಹೊತ್ತಿನ ದಿವಸ ಸರಾಸರಿ ಒಟ್ಟು ವರ್ಷಕ್ಕೆ ಒಂದು ಸಾವಿರ ರೂಪಾಯಿ ತೆರಿಗೆ ಬೀಳುತ್ತದೆ. ಇವುಗಳಿಂದ ಬರುವ ವರಮಾನ 33,17 000 ರೂಪಾಯಿಗಳು. ನಾವು ಈಗ ಇದನ್ನು ಸಾವಿರ ರೂಪಾಯಿಗಳಿಂದ 1,440 ರೂಪಾಯಿಗಳಿಗೆ ಏರಿಸಿದ್ದೇವೆ, ಒಂದು ಲಾರಿಗೆ ವರ್ಷಕ್ಕೆ 440 ರೂಪಾಯಿಗಳನ್ನು ಹೆಚ್ಚು ಮಾಡಿದ ಹಾಗಾಯಿತು. ಇದನ್ನು 12ರಿಂದ ಭಾಗಿಸಿದರೆ ತಿಂಗಳಿಗೆ ಎಷ್ಟಾಗುತ್ತದೆಂಬುದನ್ನು ಲೆಕ್ಕಹಾಕಬಹುದು. ಈ ಲೆಕ್ಕದ ಪ್ರಕಾರ ಇದರಿಂದ 14,72,680 ರೂಪಾಯಿ ವರ್ಷಕ್ಕೆ ಜಾಸ್ತಿ ಬರುತ್ತದೆ. ಈಗ ನಮ್ಮ ಸಂಸ್ಥಾನದಲ್ಲಿ ಅನೇಕ ಲಾರಿಗಳಿದ್ದು ಇವು ಬಹಳ ಉತ್ಪತ್ತಿದಾಯಕವಾಗಿವೆ ಎಂಬುದನ್ನು ಜನರು ತಿಳಿದಿದ್ದಾರೆ. ಇಲ್ಲದಿದ್ದರೆ ಯಾರೂ ಈ ಕೆಲಸವನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ. 440 ರೂಪಾಯಿ ಅಷ್ಟೇನೂ ಹೊರಲಾರದ ಹೊರೆಯಾಗಲಾರದೆಂದು ನನ್ನ ಅಭಿಪ್ರಾಯ. ಬಹುಶಃ ಇದೊಂದನ್ನಾದರೂ ಶ್ರೀಮಾನ್ ಗೋವಿಂದರೆಡ್ಡಿಯವರು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

ಬಸ್ಸುಗಳ ವಿಚಾರ ತೆಗೆದುಕೊಂಡರೆ, ಸಂಸ್ಥಾನದಲ್ಲಿ 1,886 ಬಸ್ಸುಗಳಿವೆ. ಇದುವರೆಗೆ ಇವುಗಳಿಗೆ ಸೀಟಿಂಗ್ ಟ್ಯಾಕ್ಸ್ ಒಂದು ಕ್ವಾರ್ಟರಿಗೆ 7½ ರೂಪಾಯಿಗಳಂತೆ ಹಾಕುತ್ತಿದ್ದೇವೆ. ವರ್ಷಕ್ಕೆ 30 ರೂಪಾಯಿಗಳು. ಇದನ್ನು ಕ್ವಾರ್ಟರಿಗೆ 20 ರೂಪಾಯಿ, ಅಂದರೆ ವರ್ಷಕ್ಕೆ 80 ರೂಪಾಯಿ ಮಾಡಬಹುದೆಂದು ಮಾಡಿದ್ದೆವು. ಆದರೆ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ಆಲೋಚನೆಮಾಡುವುದರಲ್ಲಿ ನಿಮ್ಮ ಅಭಿಪ್ರಾಯಕ್ಕೆ ಮನ್ನಣೆಕೊಡಬೇಕೆಂಬ ಸದುದ್ದೇಶದಿಂದ ಕಡಮೆಮಾಡಿದೆವು. ಬಡವರು ಬಸ್ಸುಗಳನ್ನುಪಯೋಗಿಸುತ್ತಿದ್ದಾರೆ, 'ಟ್ರಾಫಿಕ್ ಮೈಂಡೆಡ್' ಆಗಿದ್ದಾರೆ. ಈ ಕೃತಿಗಾರಿಕೆಯನ್ನು ಕೊಲ್ಲಬಾರದೆಂದು ಹೇಳಿದರಿ, ಇದು ಬೇರೆ ಪ್ರಶ್ನೆ. ಆದರೂ ಸ್ವಲ್ಪ ಕಷ್ಟವಾಗಬಹುದೆಂದು ಮಾನವರಿಕೆಯಾದುದರಿಂದ ಸೆಲೆಕ್ಟ್ ಕಮಿಟಿಯವರಿಗೆ ಇದನ್ನು ಬದಲಾಯಿಸಬೇಕೆಂದು ಮನಸ್ಸಿಗೆ ಹೊಳೆಯಿತು. ನಾವು ಮೊದಲು ಮಾಡಿದ ಹಾಗೆ 12ರೂಪಾಯಿ ಹೆಚ್ಚಿಗೆ ಮಾಡಿದ್ದಿದ್ದರೆ, ನಾವು ಮೊದಲು ಯೋಚನೆಮಾಡಿದ ಹಾಗೆ ಹಾಕಿದ್ದಿದ್ದರೆ, ಇದರಿಂದ ವರ್ಷಕ್ಕೆ 21,51,800 ರೂಪಾಯಿಗಳು ಬರುತ್ತಿತ್ತು. ಆದರೆ ಇದು ಬಹುಶಃ ದೊಡ್ಡ ಹೊರೆಯಾಗಬಹುದೆಂದೂ ಒಂದೇ ಸಾರಿ ಹಾಗೆ ಮಾಡಬಾರದೆಂದೂ ಮಾನವರಿಕೆಯಾಗಿ, ಅದನ್ನು 20 ರೂಪಾಯಿಗಳಿಂದ 12½ ರೂಪಾಯಿ, ಅಂದರೆ ವರ್ಷಕ್ಕೆ 50 ರೂಪಾಯಿ ಮಾಡಿದೆವು. ಅಂದರೆ, 80 ರೂಪಾಯಿಗಳಿಂದ 50 ರೂಪಾಯಿಗಳಿಗೆ ಇಳಿದರೆ, ಸೀಟಿಗೆ 30 ರೂಪಾಯಿಗಳು ಕಡಮೆಯಾದಂತಾಯಿತು. ಸರಾಸರಿ ಒಂದು ಬಸ್ಸಿನಲ್ಲಿ 40 ಸೀಟುಗಳಿದ್ದರೆ ಎಷ್ಟು ಪರಿಹಾರ ಸಿಕ್ಕಿತೆಂಬುದನ್ನು ದಯೆಯಿಟ್ಟು ಉದಾರದೃಷ್ಟಿಯಿಂದ ನೋಡಬೇಕು. ಈಗ ನಾವು ಹೆಚ್ಚಿಗೆಮಾಡಿರುವುದರಿಂದ ವರ್ಷಕ್ಕೆ 8,62,648 ರೂಪಾಯಿ ಇದುವರೆಗೆ ಬರುವುದಕ್ಕಿಂತ ಹೆಚ್ಚಾಗಿ ಬರುತ್ತದೆ. 24 ಲಕ್ಷ ಬರುವುದರಲ್ಲಿ 8 ಲಕ್ಷ ಹೋದರೆ 16 ಲಕ್ಷ ರೂಪಾಯಿ ಬಸ್ಸಿನವರಿಗೆ ಪರಿಹಾರ ಕೊಟ್ಟಹಾಗಾಯಿತು.

Sri B. HUTCHE GOWDA.—What is the rate in Madras ?

ಶ್ರೀ ಎಚ್. ಸಿದ್ಧವೀರಪ್ಪ.—ಅಲ್ಲಿ 20 ರೂಪಾಯಿಗಳಿದೆ. ಅದೇ ರೇಟಿನ ಪ್ರಕಾರ ನಾವು ಹಾಕಿದ್ದಿದ್ದರೆ 24 ಲಕ್ಷ ರೂಪಾಯಿ ಹೆಚ್ಚಾಗಿ ಬರುತ್ತಿತ್ತು; ಈಗ 8,62,648 ರೂಪಾಯಿ ಹೆಚ್ಚಿಗೆ ಬರುತ್ತದೆ. ಮೊದಲು 14,70,800 ರೂಪಾಯಿ ಈ ಬಾಬಿನಿಂದ ಬರುತ್ತಿತ್ತು. ಈಗ ಜಾಸ್ತಿ ಬರುವುದು 8,62,648 ರೂಪಾಯಿ.

ಮದರಾಸಿನಲ್ಲಿ ರೋಡ್ ಸೆಸ್ ಇದೆಯೇ ಎಂದು ಪ್ರಾಯಶಃ ಶ್ರೀ ರಾಜಶೇಖರಮೂರ್ತಿಯವರು ವಾದ ಮಾಡಿದರು. ಅಲ್ಲಿ ಸರ್‌ಚಾರ್ಜ್ ಎಂದಿದೆ, ಪ್ಯಾಸೆಂಜರ್ ಸೀಟಿಗೆ ಒಂದು ಕ್ವಾರ್ಟರಿಗೆ 12½ ರೂಪಾಯಿ ಇದೆ. ಅದಕ್ಕೆ ಕಾರಣವಿದೆ. ನಮ್ಮ ರೋಡ್ ಸೆಸ್ ಸೇರಿಸಿ ಲೆಕ್ಕಹಾಕಿದರೆ ಎಷ್ಟು ಬರುತ್ತದೆ ಎಂಬುವನ್ನು ಲೆಕ್ಕ ಮಾಡಿ ನೋಡಬಹುದು. ಬಾಕಿ ಉಳಿದದ್ದು, standing passengers ಗೆ ನಾವು ಜಾಸ್ತಿಮಾಡಿಲ್ಲ. ಅದು ಈಗೆಷ್ಟಿದೆಯೋ ಅಷ್ಟೇ ಇದೆ.

ಇನ್ನು ಮುಖ್ಯವಾಗಿ ಸಿಟಿಯಲ್ಲಿರತಕ್ಕ ಬಸ್ಸುಗಳಿಗೆ ಎಂದರೆ ಮುಖ್ಯವಾಗಿ ಬೆಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಕೆ.ಜಿ.ಎಫ್. ಬಸ್ಸುಗಳಿಗೆ ಇದುವರೆಗೂ ರೋಡ್ ಸೆಸ್ ಹತ್ತು ರೂಪಾಯಿಗಳು ಇತ್ತು. ಈಗ ಅದನ್ನು 23 ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಆಲೋ

(ಶ್ರೀ ಹೆಚ್. ಸಿದ್ದವೀರಪ್ಪ)

ಚನೆಮಾಡಿದ್ದೆವು. ಹೀಗೆ 23 ರೂಪಾಯಿಗಳಂತೆ ರೋಡ್ ಸೆಸ್ಸುಹಾಕಿದ್ದರೆ ಅದರಿಂದ ನಮಗೆ 1,87,200 ರೂಪಾಯಿಗಳು ಜಾಸ್ತಿ ಬರುತ್ತಿತ್ತು. ಇದೂ ಸಹ ಜಾಸ್ತಿ ಆಗಬಹುದೆಂದು 20 ರೂಪಾಯಿಗಳನ್ನು ಹಾಕಿದರೆ ಸಾಕೆಂದು ಆಲೋಚನೆಮಾಡಿದೆವು. ಹೀಗೆ 23 ರೂಪಾಯಿಗಳಿಂದ 20 ರೂಪಾಯಿಗಳಿಗೆ ಇಳಿಸಿದನಂತರ ನಮಗೆ ಬರತಕ್ಕ ವರಮಾನ ಒಂದು ಲಕ್ಷ 44 ಸಾವಿರ ರೂಪಾಯಿಗಳು. ಈಗ ಸರ್ಕಾರದವರ ಈ Taxation measures ಗಳಿಂದ ಸೆಲೆಕ್ಟ್ ಸಮಿತಿಯವರಿಂದ ಅಂಗೀಕೃತವಾಗಿ ಬಂದಿರತಕ್ಕ ವರಧಿಯ ಪ್ರಕಾರ ನಮಗೆ 29,86,268 ರೂಪಾಯಿಗಳು ಹೆಚ್ಚಿಗೆ ಬರುತ್ತವೆ. ನಮ್ಮ ಸಂಸ್ಥಾನದಲ್ಲಿ ಬಸ್ ಮಾಲೀಕರು ಇನ್ನೂ ಹೆಚ್ಚುಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡ ಬೇಕೆಂದು ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ಒಂದು ಡೆಪ್ಯುಟೇಷನ್ ಪಾರ್ಟಿಯವರು ಬಂದಿದ್ದರು. ಅವರಿಗೆ ಈ ವಿಚಾರದಲ್ಲಿ ಹೆಚ್ಚಿಗೆ ಮಾಹಿತಿ ಇದ್ದುದರಿಂದ ಅವರಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದಾಗ ಈ ರೋಡ್ ಸೆಸ್ ಎಂಬುದನ್ನು ತಾವು 12½ ರೂಪಾಯಿ ಹಾಕಿದರೂ ಪರವಾಯಿಲ್ಲ, ಅದೇನೂ ಅಷ್ಟು ಹೆಚ್ಚಾಗುವುದಿಲ್ಲವೆಂದು ಅವರು ತಿಳಿಸಿದರು. ಅವಾಗ್ಯೂ ಬಹಳ ಉದಾರ ಮನಸ್ಸಿನಿಂದ ಸೆಲೆಕ್ಟ್ ಸಮಿತಿಯವರು ಹೆಚ್ಚಿನ ರಿಯಾಯ್ತಿಯನ್ನು ತೋರಿಸಿ 12 ರೂಪಾಯಿಗಳಿಗಿರಬೇಕೆಂದು ಕ್ಲುಪ್ತ ಮಾಡಿದ್ದಾರೆ. ಯಾವ ಪ್ರಯಾಣಸೌಕರ್ಯಗಳು ಹೆಚ್ಚುಮಾಡಲ್ಪಡಬೇಕೆಂದು ಎದುರುಪಕ್ಷದ ಮಾನ್ಯ ಸದಸ್ಯರುಗಳು ಪ್ರತಿಭಟನೆಮಾಡುತ್ತಿದ್ದಾರೋ ಅಂಥಾ ಉದ್ದೇಶ ಈಗಾಗಲೇ ಸಾಧನೆಯಾಗಿರುವುದರಿಂದ ಈಗ ಅವರು ಇದನ್ನು ಪ್ರತಿಭಟಿಸಲಾರರೆಂದೂ, ಒಂದು ವೇಳೆ ಹಾಗೂ ಪ್ರತಿಭಟಿಸುವುದಾದರೆ ಇದನ್ನು ಪ್ರತಿಭಟಿಸ ಬೇಕೆಂಬ ಉದ್ದೇಶದಿಂದಲೇ ಪ್ರತಿಭಟಿಸುತ್ತಿದ್ದಾರೆಂದು ನಾನು ತಿಳಿದುಕೊಳ್ಳಬೆಕಾಗುತ್ತದೆ.

ಇನ್ನೊಂದು ವಾದ: ರಸ್ತೆಗಳಿಂದ ಬರತಕ್ಕ ವರಮಾನದ ಹಣವನ್ನು ರಸ್ತೆಗಳ ರಿಪೇರಿಗಾಗಿಯೇ ಹಾಕಬೇಕೆಂದು ವಾದಿಸಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಈ ರಸ್ತೆಗಳ ಬಗ್ಗೆ ಎಷ್ಟು ನಿಗಾ ಇಟ್ಟು ಕೆಲಸಮಾಡುತ್ತಿದ್ದೇವೆಂಬುದನ್ನು ಅವರು actuals ತೆಗೆದುಕೊಂಡು ನೋಡಿದರೆ 1951ಕ್ಕೆ 52·45 ಲಕ್ಷ ರೂಪಾಯಿಗಳು ಖರ್ಚಾಗಿದೆ; 1951–52ಕ್ಕೆ 67·10 ಲಕ್ಷ ರೂಪಾಯಿಗಳೂ, 52–53ಕ್ಕೆ ರಿವೈಜ್ಡ್ ಎಸ್ಟಿಮೇಟ್ ಪ್ರಕಾರ 86 ಲಕ್ಷ 81 ಸಾವಿರ ರೂಪಾಯಿಗಳು ಖರ್ಚಾಗಿದ್ದು ಇನ್ನು 53–54ನೇ ಸಾಲಿಗೆ ರಸ್ತೆಗಳ ರಿಪೇರಿ, ಸೇತುವೆಗಳ ನಿರ್ಮಾಣ, ಇತ್ಯಾದಿ ಬಾಬುಗಳಿಗೆಲ್ಲಾ ಹಿಂದೆ ಯಾವ ಸಾಲಿನಲ್ಲಿಯೂ ಒದಗಿಸದಿದ್ದಷ್ಟು ಹೆಚ್ಚಿನ ಹಣವನ್ನು, ಎಂದರೆ, 105 ಲಕ್ಷ 65 ಸಾವಿರ ರೂಪಾಯಿಗಳನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕದ್ದನ್ನು ತಾವೆಲ್ಲರೂ ಒಪ್ಪಿಕೊಂಡಿದ್ದೀರಿ. ಹೀಗೆ ವರ್ಷೇ ವರ್ಷೇ ಬರಬರುತ್ತ ಇದು 105 ಲಕ್ಷಗಳಿಗೆ ಹೆಚ್ಚಿಸಿರತಕ್ಕದ್ದು ನೂರಕ್ಕೆ ನೂರರಷ್ಟು ಖರ್ಚು ಜಾಸ್ತಿ ಮಾಡಿದ್ದೇವೆಂಬುದು ತಮಗೂ ಗೊತ್ತಾಗುತ್ತದೆ. ಅಂದ ಮೇಲೆ ಇಷ್ಟೊಂದು ಅಪಾರವಾದ ಖರ್ಚುವೆಚ್ಚಗಳಿಗೆಲ್ಲಾ ದುಡ್ಡು ಎಲ್ಲಿಂದ ಬರಬೇಕು! ಇದನ್ನು ನಾವು ಜನರಲ್ ರೆವಿನ್ಯೂನಿಂದ ಹಾಕಿಕೊಳ್ಳಬೇಕು. ಶ್ರೀ ಮಹಮದ್ ಇಮಾಂರವರೂ ಮತ್ತು ಶ್ರೀ ಹುಚ್ಚೇಗೌಡರು ನಾವು ಕೊಚ್ಚಿರತಕ್ಕ ಅಂಕಿಅಂಶಗಳನ್ನು ನೋಡಿದರೆ ರಸ್ತೆ ಮತ್ತು ಸೇತುವೆ ಇತ್ಯಾದಿ ಬಾಬುಗಳಿಗೆ ಎಷ್ಟು ಹಣವನ್ನೊದಗಿಸಿದ್ದೇವೆಂಬುದು ಅವರಿಗೇ ಗೊತ್ತಾಗುತ್ತದೆ. ನಾನು ತಮ್ಮಲ್ಲಿ ವಿಜ್ಞಾಪನೆಮಾಡಿ ಕೊಳ್ಳತಕ್ಕದ್ದು ಇಷ್ಟೆ: ಯಾವ ಕಾಲದಲ್ಲಿಯೇ ಆಗಲಿ, ಯಾವ ದೇಶದಲ್ಲೇ ಆಗಲಿ, ಸುಂಕ ಹಾಕತಕ್ಕದ್ದು ಜನರ ದೃಷ್ಟಿಯಲ್ಲಿ ಬಹಳ ಅಪ್ರಿಯವಾದ ಕೆಲಸ.

ಶ್ರೀ ಬಿ. ಹುಚ್ಚೇಗೌಡ.—ಬರುವ ಉತ್ಪತ್ತಿಯೋ?

Sri H. SIDDAVEERAPPA.—If you want receipts, I will give you. There is nothing to hide.

1950–51ರಲ್ಲಿ 33·29 ಲಕ್ಷ, 51–52ರಲ್ಲಿ 46·94 ಲಕ್ಷ; 52–53ಕ್ಕೆ ರಿವೈಜ್ಡ್ ಲೆಕ್ಕಾಚಾರದ ಪ್ರಕಾರ 49·97 ಲಕ್ಷ, 53–54ಕ್ಕೆ 59·65 ಲಕ್ಷ ಆದಾಯ ಬರುವುದಾಗಿ ನಿರೀಕ್ಷಿಸಲಾಗಿದೆ. ಅದರೆ ಈ ಸುಂಕ ಹಾಕುವುದು ಬಹಳ ಅಪ್ರಿಯವಾದ ಕೆಲಸವೆಂದು ಜನರಲ್ಲಿ ಪ್ರಚಾರಮಾಡಿ ಅವರನ್ನು ಎತ್ತಿಕಟ್ಟುವುದು ಬಹಳ ಸುಲಭ. ಆದರೆ ಆಡಳಿತ ನಡೆಸತಕ್ಕವರು ಬರೀ ಕೈಯಲ್ಲಿ ಮೊಳ ಹಾಕುವುದಕ್ಕಾಗುವುದಿಲ್ಲವೆಂಬುದನ್ನು ತಾವು ಮರೆಯಬಾರದು.

Sri J. MOHAMED IMAM.—That is your practice.

ಶ್ರೀ ಎಚ್. ಸಿದ್ದವೀರಪ್ಪ.—ಸೆಲೆಕ್ಟ್ ಕಮಿಟಿಯವರು ಬಹಳ ದೂರದೃಷ್ಟಿಯಿಂದ ಆಲೋಚನೆಮಾಡಿ ಈ ತೆರಿಗೆಯನ್ನು ಹಾಕಿದ್ದಾರೆ. ಇದಕ್ಕೆ ಸರ್ಕಾರವೂ ಒಮ್ಮತವಾದ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That the Mysore Elementary Education and Motor Vehicles Taxation and Tolls (Amendment) Bill, 1953, as reported by the Select Committee, be taken into consideration."

The motion was adopted.

Mr. SPEAKER.—Clauses 2 and 3. The question is:

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is:

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—Clause 1. The question is:

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri K. HANUMANTHAIYA.—Sir, I move :

"That the Mysore Elementary Education and Motor Vehicles Taxation and Tolls (Amendment) Bill, 1953, as reported by the Select Committee, be passed."

Mr. SPEAKER.—The question is :

"That the Mysore Elementary Education and Motor Vehicles Taxation and Tolls (Amendment) Bill, 1953, as reported by the Select Committee, be passed."

The motion was adopted.

Sri K. HANUMANTHAIYA.—Tomorrow's business ?

Mr. SPEAKER.—The remaining Government Bills. The House will now rise for the day and meet tomorrow at 12 NOON.

The House adjourned at Thirty Minutes past Five of the Clock to meet again at Twelve of the Clock on Tuesday, 31st March 1953.

W D 4516 - G P B—500 - 11-1-54